ಓ ಎಸ್ ನಂ. 17/2021
ಡಿ ಡಬ್ಲ್ಯು 2
ದಿನಾಂಕ 03-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರಃ ಶ್ರೀ ಎಸ್ ಸಿ ಎನ್ ವಕೀಲರಿಂದಃ

ನಾನು ಮತ್ತು ನನ್ನ ತಂದೆಯವರು ದಾವಾ ಐಟಂ ನಂ.2 ರ ಆಸ್ತಿಯ ಕ್ರಯಪತ್ರವನ್ನು ಗಣೇಶಚಾರ್ ರವರಿಗೆ ಮಾಡಿಕೊಡುವ ಸಮಯದಲ್ಲಿ ನನ್ನ ತಂದೆ ಬದುಕಿದ್ದರು ಎಂದರೆ ಸರಿ. ದಾವಾ ಐಟಂ ನಂ.2 ರ ಆಸ್ತಿಯು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ತಂದೆಯ ಸಹೋದರರು 1991-92 ರಲ್ಲಿ ವಿಭಾಗ ಮಾಡಿಕೊಂಡಿದ್ದು ಅದರಂತೆ ಎಂ ಆರ್ ನಂ.24/1991-92 ರ ಪ್ರಕಾರ ದಾವಾ ಐಟಂ ನಂ.2 ರ ಸ್ವತ್ತು ನನ್ನ ತಂದೆಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರ ಮಾಡಿಕೊಡುವ ಕಾಲಕ್ಕೆ ನನ್ನ ತಂದೆ ಸರ್ಕಾರಿ ನೌಕರಿಯಲ್ಲಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಕ್ರಯಪತ್ರ ಮಾಡುವ ಅವಧಿಯಲ್ಲಿ ನನ್ನ ತಂದೆಗೆ ತುಂಬಾ ಆರೋಗ್ಯದ ಸಮಸ್ಯೆ ಇತ್ತು ಎಂದು ನುಡಿಯುತ್ತಾರೆ. ದಿನಾಂಕ 12/12/2018 ರ ಮೇಲ್ಕಂಡ ವ್ಯವಹಾರಕ್ಕೆ ಸಂಬಂದಪಟ್ಟ ಕ್ರಯಪತ್ರದಲ್ಲಿ ವಾದಿಗಳು ಪಕ್ಷಗಾರರಲ್ಲ ಎಂದರೆ ಸರಿ. ಸದರಿ ಕ್ರಯಪತ್ರಕ್ಕೆ ಯಾರು ಮಾಹಿತಿ ನೀಡಿ ಬರವಣಿಗೆ ಮಾಡಿಸಿರುತ್ತಾರೆಂದು

ನನಗೆ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸದರಿ ಕ್ರಯಪತ್ರದಲ್ಲಿ ನನ್ನ ತಂದೆಯ ಆರೋಗ್ಯದ ಸಮಸ್ಯೆ ಬಗ್ಗೆ ನಮೂದು ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಆ ರೀತಿ ನಮೂದು ಮಾಡುವುದು ಅಷ್ಟು ಸೂಕ್ತವಲ್ಲ ಆಗಿತ್ತು ಎಂದು ನುಡಿಯುತ್ತಾರೆ. 2018 ರಲ್ಲಿ ಮೇಲ್ಕಂಡ ಕ್ರಯಪತ್ರ ಮಾಡುವ ಕಾಲಕ್ಕೆ ನನ್ನ ತಂದೆ ಅಜ್ಜಂಪುರದಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. ಆ ಸಂದಭರ್ದಲ್ಲಿ ನಾನೇನಾದರೂ ಖುದ್ದಾಗಿ ದಾವಾ ಐಟಂ ನಂ.2 ರ ಆಸ್ತಿಯನ್ನು ಗಣೇಶಾಚಾರ್ ರವರಿಗೆ ಮಾರಾಟ ಮಾಡುತ್ತಿರುವ ವಿಚಾರವನ್ನು ವಾದಿಗಳಿಗೆ ತಿಳಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

ದಾವಾ ಐಟಂ ನಂ.3 ರ ಆಸ್ತಿ ಸಹ ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ದಾವಾ ಐಟಂ ನಂ.4 ರ ಸ್ವತ್ತು ಅಜ್ಜಂಪುರದಲ್ಲಿದೆ ಎಂದರೆ ಸರಿ. ದಾವಾ ಐಟಂ ನಂ.4 ರ ಆಸ್ತಿ ಸಹ ನನ್ನ ತಂದೆಯ ಆಸ್ತಿ ಎಂದರೆ ಸಾಕ್ಷಿ ಸುಳ್ಳು, ಆ ಆಸ್ತಿಯನ್ನು ನಾನು ಸ್ವಂತ ದುಡಿಮೆಯಿಂದ ಗಳಿಸಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.4 ರ ಆಸ್ತಿಯನ್ನು ನನ್ನ ಸ್ವಂತ ದುಡಿಮೆಯಿಂದ ಖರೀದಿಸಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ದಾವಾ ಐಟಂ ನಂ.4 ರ

ಆಸ್ತಿಯನ್ನು ನನ್ನ ತಂದೆ ನನ್ನ ಹೆಸರಿಗೆ ಮಾಡಿರುವ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸುಳ್ಳು. ವಾದಿಗಳಿಗೆ ಆ ಸಮಯದಲ್ಲಿ ಮದುವೆಯಾಗಿದ್ದರಿಂದ ನಾನು ಮತ್ತು ನನ್ನ ತಾಯಿ ಸೇರಿ ಬಲವಂತವಾಗಿ ದಾವಾ ಐಟಂ ನಂ.4 ರ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸುಳ್ಳು. ದಾವಾ ಐಟಂ ನಂ.4 ರ ಆಸ್ತಿಯನ್ನು ನಾನು ಖರೀದಿಸಲು ನನಗೆ ಯಾವುದೇ ಆರ್ಥಿಕ ಶಕ್ತಿ ಇರಲಿಲ್ಲ ಎಂದರೆ ಸುಳ್ಳು. ನನ್ನ ತಾಯಿ ಮತ್ತು ನಾನು ಸೇರಿ ಚಿತಾವಣೆ ಮಾಡಿ ಖಾತೆಯನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇವೆ ಎಂದರೆ ಸುಳ್ಳು. ನನ್ನ ತಂದೆಯ ಜೀವಿತಾವಧಿಯಲ್ಲಿ ದಾವಾ ಐಟಂ ನಂ.4 ರ ಆಸ್ತಿಯನ್ನು ಒಟ್ಟು ಕುಟುಂಬದಲ್ಲಿ ಖರೀದಿಸಿರುವುದರಿಂದ ಅದರಲ್ಲೂ ಸಹ ವಾದಿಗಳಿಗೆ ಹಕ್ಕು ಇದೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಅದು ನನ್ನ ಸ್ವಂತ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.4 ರ ಆಸ್ತಿಯು ನನ್ನ ಸ್ವಯಾರ್ಜಿತ ಆಸ್ತಿಯಾಗಿದ್ದರೆ ಅದಕ್ಕೆ ಪೂರಕ ದಾಖಲಾತಿಗಳನ್ನು ನಾನು ಹಾಜರುಪಡಿಸುತ್ತಿದ್ದೆ ಎಂದರೆ ಸಾಕ್ಷಿ ಈ ರೀತಿ ಸಂದರ್ಭ ಬರುತ್ತದೆ ಎಂದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.4 ರ ಆಸ್ತಿಯನ್ನು ನನ್ನ ತಂದೆಯವರೇ ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು.

ದಾವಾ ಐಟಂ ನಂ.5 ಮತ್ತು 6ರ ಆಸ್ತಿಗಳು ಶಿವಮೊಗ್ಗ ಜಿಲ್ಲೆಯಲ್ಲಿರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳನ್ನು ನನ್ನ ತಂದೆ ಜೀವಿತಾವಧಿಯಲ್ಲಿರುವಾಗಲೇ ಖರೀದಿಸಲಾಗಿದೆ ಎಂದರೆ ಸಾಕ್ಷಿ ಆ ಎರಡೂ ಸ್ವತ್ತುಗಳನ್ನು ಖರೀದಿಸುವ ಸಂದರ್ಭದಲ್ಲಿ ಬಹುಶಃ ನನ್ನ ತಂದೆ ಬದುಕಿರಲಿಲ್ಲ ಎಂದು ನುಡಿಯುತ್ತಾರೆ. 15/11/2012ರಲ್ಲಿ ದಾವಾ ಐಟಂ ನಂ.5ರ ಸ್ವತ್ತನ್ನು ಖರೀದಿಸಲಾಗಿದೆ ಎಂದರೆ ಸರಿ. ದಿನಾಂಕ 21/02/2019ರಲ್ಲಿ ದಾವಾ ಐಟಂ ನಂ.6ರ ಆಸ್ತಿಯನ್ನು ಖರೀದಿಸಲಾಗಿದೆ ಎಂದರೆ ಸರಿ. ದಿನಾಂಕ 21/09/2019ರಲ್ಲಿ ನನ್ನ ತಂದೆ ಮರಣ ಹೊಂದಿರುತ್ತಾರೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲಾತಿಗಳ ಪ್ರಕಾರ ದಾವಾ ಐಟಂ ನಂ.5 ಮತ್ತು 6ರ ಆಸ್ತಿಗಳನ್ನು ನನ್ನ ತಂದೆ ಮರಣ ಪೂರ್ವದಲ್ಲಿ ಖರೀದಿಸಲಾಗಿದೆ ಎಂದರೆ ಸರಿ. ಸದರಿ ಎರಡೂ ಆಸ್ತಿಗಳನ್ನು ಖರೀದಿ ಮಾಡಲು ನನ್ನ ತಂದೆಯವರೇ ಆರ್ಥಿಕ ನೆರವು ನೀಡಿರುತ್ತಾರೆ ಎಂದರೆ ಸುಳ್ಳು. ನನ್ನ ತಂದೆ ನಿವೃತ್ತಿಯಾಗುವ ನಿಕಟ ಪೂರ್ವದಲ್ಲಿ ಅವರು ಕೂಡಿಟ್ಟ ಹಣದಿಂದ ಸದರಿ ಸ್ವತ್ತುಗಳನ್ನು ಖರೀದಿಸಿರುತ್ತಾರೆ ಎಂದರೆ ಸುಳ್ಳು. ನನ್ನ ತಂದೆ ಸರ್ಕಾರಿ ಉದ್ಯೋಗದಲ್ಲಿ ಇದ್ದ ಸಮಯದಲ್ಲಿ ನನ್ನ ಹೆಸರಿಗೆ ದಾವಾ ಐಟಂ ನಂ.5 ಮತ್ತು 6ರ ಆಸ್ತಿಗಳನ್ನು ಖರೀದಿಸುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನನ್ನ ತಂದೆ ನಿವೃತ್ತಿ ಹೊಂದಿದ ನಂತರದಲ್ಲಿ ಶಿವಮೊಗ್ಗ ಹೊಳಲೂರಿನಲ್ಲಿ

ನೆಲೆಸುವ ಉದ್ದೇಶದಿಂದ ದಾವಾ ಐಟಂ ನಂ.5 ಮತ್ತು 6 ರ ಆಸ್ತಿಗಳನ್ನು ನನ್ನ ತಂದೆ ನನ್ನ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸುಳ್ಳು. 2012 ಮತ್ತು 2019 ರಲ್ಲಿ ದಾವಾ ಐಟಂ ನಂ.5 ಮತ್ತು 6 ರ ಆಸ್ತಿಗಳನ್ನು ಖರೀದಿಸುವ ಆರ್ಥಿಕ ಸಾಮರ್ಥ್ಯ ನನಗೆ ಇರಲಿಲ್ಲ ಎಂದರೆ ಸುಳ್ಳು. ಸದರಿ ಕ್ರಯಪತ್ರಗಳಲ್ಲಿ ನಾನು ಯಾವ ಆದಾಯದ ಮೂಲದಿಂದ ಸದರಿ ಸ್ವತ್ತುಗಳನ್ನು ಖರೀದಿಸಿರುತ್ತೇನೆಂದು ನಮೂದು ಮಾಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನನ್ನ ತಂದೆಯ ಆರ್ಥಿಕ ನೆರವು ಇಲ್ಲದೆ ದಾವಾ ಐಟಂ ನಂ.5 ಮತ್ತು 6 ರ ಆಸ್ತಿಗಳನ್ನು ಖರೀದಿಸುವ ಸಾಮರ್ಥ್ಯ ನನಗೆ ಇರಲಿಲ್ಲ ಎಂದರೆ ಸುಳ್ಳು. ದಾವಾ ಐಟಂ ನಂ.5 ಮತ್ತು 6 ರ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುವುದರಿಂದ ಅವುಗಳಲ್ಲಿ ವಾದಿಗಳಿಗೂ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ನಿಡಿ-4 ರ ದಾಖಲೆಯಂತೆ ದಿನಾಂಕ 29/12/2020 ರಂದು ನಾನು ಮತ್ತು ನನ್ನ ತಾಯಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ನಮೂದು ಆಗಿರುವ ಆಸ್ತಿಗಳು ನನ್ನ ಕುಟುಂಬದ ಆಸ್ತಿಗಳು ಎಂದರೆ ಸರಿ. ಸದರಿ ನಿಡಿ-4 ರ ವಿಭಾಗ ಪತ್ರವನ್ನು ನನ್ನ ತಂದೆ ಮರಣ ಹೊಂದಿದ ನಂತರ ನಮ್ಮ ಕುಟುಂಬದ ಸ್ವತ್ತುಗಳಿಗೆ ಸಂಬಂದಪಟ್ಟಂತೆ ಮಾಡಿಕೊಳ್ಳಲಾದ ಪತ್ರ ಎಂದರೆ ಸರಿ. ನಿಡಿ-4 ರ

ವಿಭಾಗ ಪತ್ರಕ್ಕೆ ವಾದಿಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಿಡಿ-4 ರ ವಿಭಾಗ ಪತ್ರದಲ್ಲಿ ನನ್ನ ತಂದೆ ಸಿದ್ದಪ್ಪರವರಿಗೆ ಹೆಣ್ಣು ಮಕ್ಕಳು ಇರುವ ವಿಚಾರವನ್ನು ಸಹ ತೋರಿಸಿಲ್ಲ ಎಂದರೆ ಸರಿ. ನಿಡಿ-4 ರ ವಿಭಾಗ ಪತ್ರದಲ್ಲಿ ಕಾಣಿಸಿರುವ ಆಸ್ತಿಗಳು ಈ ದಾವೆಯ ಐಟಂ ನಂ.5 ಮತ್ತು 6 ರ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳು ನನ್ನ ಸ್ವಯಾರ್ಜಿತ ಆಸ್ತಿಗಳು ಎಂಬ ವಿಚಾರವನ್ನು ನಿಡಿ-4 ರ ವಿಭಾಗ ಪತ್ರದಲ್ಲಿ ಕಾಣಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸದರಿ ವಿಭಾಗದ ಪತ್ರದಲ್ಲಿ ಆ ಆಸ್ತಿಗಳು ನನ್ನ ಸ್ವಯಾರ್ಜಿತ ಆಸ್ತಿಗಳು ಎಂದು ತೋರಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಆ ರೀತಿ ತೊಂದರೆ ಎಂದು ನನಗೆ ಕಾಣಲಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ನನ್ನ ತಂದೆಯ ಮೂಲ ನೆಲೆ ಯಾವುದು ಹಾಗೂ ಹೊಳಲೂರಿನಲ್ಲಿ ಏಕೆ ಇದ್ದೇವೆ ಎಂಬ ವಿಚಾರವನ್ನಾದರೂ ತೋರಿಸಿರುತ್ತೇವಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಿಡಿ-4 ರ ವಿಭಾಗ ಪತ್ರದಂತೆ ಆಸ್ತಿಗಳ ಖಾತೆ ಯಾರ ಹೆಸರಿನಲ್ಲಿದೆ ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.